# Telephone Conversation between PM and Prime Minister of Nepal

April 10, 2020

---

## ಪ್ರಧಾನ ಮಂತ್ರಿ ಮತ್ತು ನೇಪಾಳದ ಪ್ರಧಾನ ಮಂತ್ರಿ ನಡುವಿನ ದೂರವಾಣಿ ಸಂಭಾಷಣೆ

ಏಪ್ರಿಲ್ 10, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ರವರು ನೇಪಾಳದ ಪ್ರಧಾನ ಮಂತ್ರಿ ಶ್ರೇಷ್ಠ ಶ್ರೀ ಕೆ ಪಿ ಶರ್ಮಾ ಒಲಿ ರವರೊಂದಿಗೆ ಇಂದು ದೂರವಾಣಿ ಸಂಭಾಷಣೆ ನಡೆಸಿದರು .

ಎರಡೂ ದೇಶಗಳ ಮತ್ತು ಪ್ರದೇಶದ ನಾಗರಿಕರ ಆರೋಗ್ಯ ಮತ್ತು ಸುರಕ್ಷತೆಗೆ ಹೆಚ್ಚುತ್ತಿರುವ ಕೋವಿಡ್ -19 ನ ಬಿಕ್ಕಟ್ಟು ಮತ್ತು ಸವಾಲುಗಳ ಬಗ್ಗೆ ಇಬ್ಬರು ನಾಯಕರು ಅಭಿಪ್ರಾಯಗಳನ್ನು ಹಂಚಿಕೊಂಡರು. ಸಾಂಕ್ರಾಮಿಕ ರೋಗವನ್ನು ನಿಭಾಯಿಸಲು ಆಯಾ ದೇಶಗಳಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಅವರು ಚರ್ಚಿಸಿದರು.

ಪ್ರಧಾನ ಮಂತ್ರಿ ಒಲಿ ಅವರ ನೇತೃತ್ವದಲ್ಲಿ ನೇಪಾಳ ಸರ್ಕಾರವು ನೀಡಿದ ಬಿಕ್ಕಟ್ಟಿನ ಪ್ರತಿಕ್ರಿಯೆ ಮತ್ತು ನಿರ್ವಹಣೆಯನ್ನು ಹಾಗೂ ಈ ಸವಾಲನ್ನು ಎದುರಿಸುವಲ್ಲಿ ನೇಪಾಳದ ಜನರ ದೃಢಸಂಕಲ್ಪವನ್ನು ಪ್ರಧಾನ ಮಂತ್ರಿ ಮೋದಿ ಯವರು ಪ್ರಶಂಸಿಸಿದರು .

ಸಾರ್ಕ್ ದೇಶಗಳಲ್ಲಿ ಸಾಂಕ್ರಾಮಿಕ ರೋಗದ ಪ್ರತಿಕ್ರಿಯೆಯನ್ನು ಸಮನ್ವಯಗೊಳಿಸುವಲ್ಲಿ ಪ್ರಧಾನ ಮಂತ್ರಿಯ ಉಪಕ್ರಮಕ್ಕೆ ಪ್ರಧಾನ ಮಂತ್ರಿ ಒಲಿ ತಮ್ಮ ಮೆಚ್ಚುಗೆಯನ್ನು ಪುನರುಚ್ಚರಿಸಿದರು. ಭಾರತವು ನೇಪಾಳಕ್ಕೆ ನೀಡಿದ ದ್ವಿಪಕ್ಷೀಯ ಬೆಂಬಲಕ್ಕೆ ಧನ್ಯವಾದಗಳನ್ನು ವ್ಯಕ್ತಪಡಿಸಿದರು.

ಈ ಜಾಗತಿಕ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುವ ನೇಪಾಳದ ಪ್ರಯತ್ನಗಳಿಗೆ ಸಾಧ್ಯವಿರುವ ಎಲ್ಲಾ ಬೆಂಬಲ ಮತ್ತು ಸಹಾಯವನ್ನು ಖಾತ್ರಿಪಡಿಸುವ ಭಾರತದ ಬದ್ಧತೆಯನ್ನು ಪ್ರಧಾನ ಮಂತ್ರಿ ಮೋದಿಯವರು ಪುನರುಚ್ಚರಿಸಿದರು.

ಅಗತ್ಯ ಸರಕುಗಳ ಗಡಿಯಾಚೆಗಿನ ಸರಬರಾಜಿಗೆ ಅನುಕೂಲವಾಗುವುದು ಸೇರಿದಂತೆ ಕೋವಿಡ್ -19 ಪರಿಸ್ಥಿತಿಯಿಂದ ಉದ್ಭವಿಸುವ ಎಲ್ಲಾ ವಿಷಯಗಳ ಬಗ್ಗೆ ತಮ್ಮ ತಜ್ಞರು ಮತ್ತು ಅಧಿಕಾರಿಗಳು ಪರಸ್ಪರ ನಿಕಟವಾಗಿ ಸಮಾಲೋಚನೆ ಮತ್ತು ಸಮನ್ವಯವನ್ನು ಮುಂದುವರಿಸುವುದಾಗಿ ಇಬ್ಬರು ನಾಯಕರು ಒಪ್ಪಿಕೊಂಡರು.

ಪ್ರಧಾನ ಮಂತ್ರಿ ಒಲಿ ಮತ್ತು ನೇಪಾಳದ ಜನರ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಪ್ರಧಾನ ಮಂತ್ರಿಯವರು ತಮ್ಮ ಶುಭಾಶಯಗಳನ್ನು ತಿಳಿಸಿದರು.

**ನವ ದೆಹಲಿ**
**ಏಪ್ರಿಲ್ 10, 2020**

DISCLAIMER: This is an approximate translation. The original is available in English on MEA's website and may be referred to as the official press release.